ದಿಃ 03-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ಶ್ರೀ. ಎಂ.ಆರ್.ಎಲ್ ವಕೀಲರಿಂದಃ

ತಪೋವನ ಮುನಿಯಪ್ಪ ರವರಿಗೆ 4 ಜನ ಮಕ್ಕಳು. ಅವರೆಂದರೆ ವೆಂಕಸ್ವಾಮಪ್ಪ, ನಾರಾಯಣಪ್ಪ, ಗೋಪಾಲಪ್ಪ ಮತ್ತು ಕೃಷ್ಣಪ್ಪ. ನನ್ನ ತಾಯಿ ಸರೋಜಮ್ಮ ರವರು ಸದರಿ ಕೃಷ್ಣಪ್ಪನ ದೊಡ್ಡ ಮಗಳು ಎಂದರೆ ಸರಿ. ಕೃಷ್ಣಪ್ಪನ 2 ನೇ ಮಗಳ ಹೆಸರು ಕಮಲಮ್ಮ ಎಂದರೆ ಸರಿ. 2 ನೇ ಪ್ರತಿವಾದಿಯು ಸದರಿ ಕಮಲಮ್ಮ ರವರ ಪತಿ ಎಂದರೆ ಸರಿ. ದಿನಾಂಕ 13-10-1954 ರಂದು ತಪೋವನ ಮುನಿಯಪ್ಪ ರವರು ನಿಡಿ-1 ರಂತೆ ತನ್ನ ಮಕ್ಕಳಿಗೆ ಆಸ್ತಿಗಳನ್ನು 4 ಭಾಗಗಳಾಗಿ ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಿಡಿ-1 ರಲ್ಲಿ ತಪೋವನ ಮುನಿಯಪ್ಪ ಎಂದು ಮುನಿಯಪ್ಪನ ಹೆಸರನ್ನು ನಮೂದಿಸಿದ್ದಾರೆ ಎಂದರೆ ಸರಿ. ನನ್ನ ಮುತ್ತಾತ ಮುನಿಯಪ್ಪನಿಗೆ ತಪೋವನ ಮುನಿಯಪ್ಪ ಎಂದು ಹೆಸರು ಬರಲು ಕಾರಣ ಮತ್ತು ಇತಿಹಾಸವನ್ನು ತಿಳಿದುಕೊಂಡಿಲ್ಲ.

ನಿಡಿ-1 ರಲ್ಲಿರುವ ಎಲ್ಲಾ ಅಂಶಗಳು ಸರಿ ಇದೆ. ನಿಡಿ-1 ರ ಎ ಷೆಡ್ಯೂಲ್ ನಲ್ಲಿ "ಸರ್ವೆ ನಂಬರ್ **177/2 5** ಎಕರೆ **24** ಗುಂಟೆ ಜಮೀನಿನಲ್ಲಿ ಇರುವ ಎಲ್ಲಾ ಜಾತಿವಾರು ಮರಗಳು **4** ಜನ ಸಮಭಾಗದಂತೆ ಅನುಭವಿಸಬೇಕು**.** ಈ ಜಮೀನಿನಲ್ಲಿ ಹಿರಿಯರು ತಪೋವನ ಹಾಕಿ ಮರಗಳು ಬೆಳೆಸಿದ್ದಾರೆ**.** ಈ ಜಮೀನು **4** ಜನಕ್ಕೂ ಅಮಾನತ್ತು ಇದೆ" ಎಂದು ಬರೆಸಿದ್ದು ಅದು ಸರಿ ಇದೆ. ಅದೇ ರೀತಿ ಉಳಿದ 3 ಷೆಡ್ಯೂಲ್ ಗಳಲ್ಲೂ ಸಹ ಬರೆಯಲಾಗಿದೆ ಎಂದರೆ ಸರಿ. ನಿಡಿ-2 ರಂತೆ ಮುನಿಯಪ್ಪನ ಮೊದಲನೇ ಮಗನ ಹೆಂಡತಿಯಾದ ಲಕ್ಷ್ಮಮ್ಮ ರವರು ಸರ್ವೆ ನಂಬರ್ 177/2 ರ ಪೈಕಿ ¼ ಭಾಗವನ್ನು ಮುನಿಯಪ್ಪನ 2 ನೇ ಮಗನಾದ ನಾರಾಯಣಪ್ಪನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ದಿನಾಂಕ 04-02-1971 ರಂದು ನನ್ನ ಅಜ್ಜಿಯಾದ ಅಕ್ಕಾಯಮ್ಮ ರವರು ಸರ್ವೆ

ನಂಬರ್ 177/2 ರ ಪೈಕಿ ¼ ಭಾಗದ ಆಸ್ತಿಯನ್ನು ವಿ.ಸಿ ವೆಂಕಟರಮಣಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ವಿ.ಸಿ ವೆಂಕಟರಮಣಪ್ಪ ರವರು ನನ್ನ ಅಜ್ಜಿಯ ಸಹೋದರ ಎಂದರೆ ಸರಿ. ನಿಡಿ-3 ರಲ್ಲಿ "ಈ ಮೂಲಕ ನಿಮಗೆ ಕೊಟ್ಟಿರುತ್ತೇನೆ. ಇದು ಸಂಸ್ಕೃಷ್ಟದಲ್ಲಿರುತ್ತದೆ " ಎಂದು ಬರೆದಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 177/2 ರ ಆಸ್ತಿಗೆ ಸಂಬಂಧಿಸಿದಂತೆ ನಿಡಿ-1 ಮತ್ತು ತದನಂತರದ ಕ್ರಯ ಪತ್ರಗಳಲ್ಲಿ ಯಾವುದೇ ಪ್ರತ್ಯೇಕ ಚೆಕ್ಕುಬಂದಿ , ವಿಸ್ತೀರ್ಣ ಮತ್ತು ಪ್ರತ್ಯೇಕ ಜಮೀನಿನ ನಮೂನೆಗಳನ್ನು ನಮೂದಿಸದೇ ಇರುವುದು ಸದರಿ ಜಮೀನನ್ನು ಎಲ್ಲರೂ ಒಟ್ಟಾಗಿ ತಪೋವನದ ಉದ್ದೇಶಕ್ಕಾಗಿ ಅಮಾನತ್ತಿನಲ್ಲಿ ಇಟ್ಟಿರುವುದನ್ನು ತೋರಿಸುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹಿರಿಯರ ಸಮಾಧಿಗಳು ಸದರಿ ತಪೋವನದಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ತಪೋವನದಲ್ಲಿ ನೀರು ಶೇಖರಣೆ ಆಗಲು ರಚಿಸಿರುವ ಕುಂಟೆಗಳು ಇವೆ ಎಂದರೆ ಸರಿಯಲ್ಲ. ಸದರಿ ತಪೋವನದಲ್ಲಿ ಹಿರಿಯರು ಬೆಳೆಸಿದಂತಹ ಎಲ್ಲಾ ಜಾತಿಯ ಮರಗಳು ಇಂದಿಗೂ ಇವೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಬೇಸಾಯಕ್ಕೆ ಬಳಸಿಲ್ಲ ಎಂದರೆ ಸರಿ.

ಪ್ರತಿ ಕಾರ್ತಿಕ ಸೋಮವಾರದಂದು ಸದರಿ ತಪೋವನದಲ್ಲಿ ತಪೋವನದ ಮುನಿಯಪ್ಪನ ಎಲ್ಲಾ ಸಂಬಂಧಿಕರು ಸೇರಿ ಸಮಾರಾಧನೆ ಮಾಡುತ್ತಾ ಬರುತ್ತಿದ್ದೇವೆ ಎಂದರೆ ಸರಿಯಲ್ಲ. ತಪೋವನದ ಆಶಯವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ತಪೋವನದ ಮುನಿಯಪ್ಪ ರವರು ತಪೋವನದ ಆಸ್ತಿಯನ್ನು ನಿಡಿ-1 ರಲ್ಲಿ ಅಮಾನತ್ತಿನ ಷರತ್ತಿನೊಂದಿಗೆ ಬರೆಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಚಿಕ್ಕಮ್ಮ ರವರು ನನ್ನ ಅಜ್ಜಿ ಈಗಾಗಲೇ ಮಾರಾಟ ಮಾಡಿದ್ದಂತಹ ¼ ಭಾಗಾಂಶದ ಆಸ್ತಿಯನ್ನು ನನ್ನ ಅಜ್ಜಿಯ ಸಹೋದರನ ವಾರಸುದಾರರಿಂದ ನಿಡಿ-4 ರಂತೆ ಪುನಃ ಖರೀದಿ ಮಾಡಿದ್ದಾರೆ ಎಂದರೆ ಸರಿ. ನಿಡಿ-4 ರಲ್ಲಿ ಖರಾಬು ಆಸ್ತಿಯನ್ನು ಸಹ ಸೇರಿಸಲಾಗಿದೆ ಎಂದರೆ ಸರಿ. ನಿಡಿ-4 ರಲ್ಲಿ ಬಾಗಾಯತ್ ಮತ್ತು

ಋಷ್ಕಿ ಎಂಬ ವಿಭಾಗಗಳನ್ನು ಉದ್ದೇಶಪೂರ್ವಕವಾಗಿ ಮೂಲ ಆಶಯಕ್ಕೆ ವಿರುದ್ಧವಾಗಿ ಬರೆಸಲಾಗಿದೆ ಎಂದರೆ ಸರಿಯಲ್ಲ. ನಿಡಿ-5 ರಿಂದ 10 ರಲ್ಲೂ ಸಹ ಉದ್ದೇಶಪೂರ್ವಕವಾಗಿ ಮೂಲ ಆಶಯಕ್ಕೆ ವಿರುದ್ಧವಾಗಿ ಬರೆಸಲಾಗಿದೆ ಎಂದರೆ ಸರಿಯಲ್ಲ. ಸದರಿ 177/2 ರ ಆಸ್ತಿಯನ್ನು ಯಾವುದೇ ವಿಭಾಗ ಮಾಡದೇ 4 ಮಕ್ಕಳಿಗೂ ಸಹ ಸಮನಾಗಿ ಒಟ್ಟಿಗೆ ಅಮಾನತ್ತಿನಲ್ಲಿಟ್ಟು ನೀಡಿರುವುದು ತಪೋವನದ ಆಸ್ತಿಯನ್ನು ಉಳಿಸಿಕೊಂಡು ಹೋಗುವ ಆಶಯ ಎಂದರೆ ಸರಿಯಲ್ಲ. ಸದರಿ ತಪೋವನದ ಆಸ್ತಿಯನ್ನು 3 ನೇ ವ್ಯಕ್ತಿಗೆ ಮಾರಾಟ ಮಾಡುವುದನ್ನು ತಪ್ಪಿಸುವ ಮತ್ತು ತಪೋವನದ ಆಸ್ತಿಯನ್ನು ಮುನಿಯಪ್ಪನ ಕುಟುಂಬಕ್ಕೆ ಉಳಿಸಿ ಬೆಳೆಸುವ ಉದ್ದೇಶದಿಂದ ನಿಡಿ-1 ರಲ್ಲಿ ಅಮಾನತ್ತಿನ ಷರತ್ತನ್ನು ಬರೆಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು